ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ
ಸೋಮವಾರಪೇಟೆ
ಸಿ.ಸಿ. ನಂ. 511 /2024

| | | |
|---|---|---|
| ಹೆಸರು | : ದಿನೇಶ್ | ಪಿಡಬ್ಲ್ಯೂ-3 |
| ತಂದೆಯ ಹೆಸರು | : ಐತಪ್ಪ | ಸಿಡಬ್ಲ್ಯೂ-3 |
| ವಯಸ್ಸು | : 43 ವರ್ಷ | |
| ವೃತ್ತಿ | : ವ್ಯಾಪಾರ | |
| ವಾಸ ಸ್ಥಳ | : ಗರಗಂದೂರು | |

ದಿಃ 06.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅಭಿಯೋಜಕರಿಂದ

ಆರೋಪಿ ನನಗೆ ಪರಿಚಯ ಇರುತ್ತದೆ. ನನಗೆ ಚಾಸಾ 4 ರವರ ಪರಿಚಯ ಇರುವುದಿಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು ಅದರಲ್ಲಿನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯು ಸ್ಥಳ ಪಂಚನಾಮೆಯಾಗಿದ್ದು ಮಹಜರನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲ್ಪಟ್ಟಿದೆ. ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಇನ್ನೊಂದು ದಾಖಲೆಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಮಾದರಿ ಮೊಹರನ್ನು ಈಗಾಗಲೇ ನಿಪಿ 2 ಸಾಕ್ಷಿಯ ಸಹಿಯನ್ನು ನಿಪಿ 2(ಬಿ) ಎಂದು ಗುರುತಿಸಲಾಯಿತು. ನಿಪಿ 1 ಮತ್ತು 2 ರಲ್ಲಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ. ರವರು ಅನುಮತಿ ಕೋರಿರುತ್ತಾರೆ. ಪರಿಶೀಲಿಸಿ ಆಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ</u> ಮಾನ್ಯ ಸ. ಸ. ಅಭಿಯೋಜಕರಿಂದ:

ದಿಃ26.08.2024 ರಂದು ಸಮಯ ಸುಮಾರು 11.10 ಗಂಟೆಯ ಸಮಯದಲ್ಲಿ ನಾನು ಮತ್ತು ಚಾಸಾ 4 ರವರು ಸೋಮವಾರ ಪೇಟೆ ತಾಲ್ಲೂಕು ಕಚೇರಿಯ ಬಳಿ ಮಾತನಾಡುತ್ತ ನಿಂತಿರುವಾಗ ಚಾಸಾ 1 ರವರು ಚಾಸಾ 6 ರವರ ಮುಖಾಂತರ ನಮ್ಮನ್ನು ಪೋಲಿಸ್ ಠಾಣೆಗೆ ಬರಮಾಡಿಕೊಂಡು ನಮ್ಮ ಬಳಿ ಗರಗಂದೂರು ಬಿ ್ರಮದ ವಾಸು ಎಂಬುವವರು ಮಧ್ಯದ ಟೆಟ್ರಾ ಪ್ಯಾಕೆಟ್ ಗಳನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಸಲುವಾಗಿ ಸೋಮವಾರ ಪೇಟೆ ಟೌನ್ ನಿಂದ ನಗರದ ಕಡೆಗೆ ಹೋಗುತ್ತಿರುವ

ವಿಚಾರವನ್ನು ನಮಗೆ ತಿಳಿಸಿ ಪಂಚರಾಗಿ ಬರಬೇಕೆಂದು ಕೇಳಿಕೊಂಡ ಮೇರೆಗೆ ನಾವುಗಳು ಒಪ್ಪಿಕೊಂಡಿರುತೆತೀ ವೆ ಎಂದರೆ ಸರಿಯಲಲ. ನಂತರ ನಾವುಗಳು ಪೋಲಿಸ್ ಸಿಬ್ಬಂದಿಗಳೊಂದಿಗೆ ಅವರ ಇಲಾಖಾ ಜೀಪಿನಲ್ಲಿ ಕರೆದುಕೊಂಡು ನಗರೂರು ಗ್ರಾಮದ ಬಸ್ ನಿಲ್ದಾಣದ ಬಳಿ ಹೋದಾಗ ಅಲ್ಲಿ ಒಬ್ಬ ವ್ಯಕ್ತಿ ಕುಳಿತಿದ್ದು ಅವರ ಬಚಿಳಿ ಒಂದು ಪ್ಲಾಸ್ಟಿಕ್ ಬ್ಯಾಗ್ ನಲ್ಲಿ ಏನೋ ತುಂಬಿಸಿಕೊಂಡು ಕುಳಿಚಿತಿದ್ದುದು ಕಂಡುಬಂದಿದ್ದು ಆಗ ಚಾಸಾ 1 ಮತ್ತು ಇಲಾಖಾ ಸಿಬ್ಬಂದಿಯವರು ಮತ್ತು ನಾನು ಆ ವ್ಯಕ್ತಿಯ ಹತ್ತಿರ ಹೋಗಿ ಇಲಾಖಾ ಸಿಬ್ಬಂದಿಯವರು ಆತನ ಹೆಸರು ವಿಳಾಸ ಕೇಳಲಾಗಿ ಆತನು ವಾಸು ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಆತನ ಬಳಿ ಇದ್ದ ಬ್ಯಾಗನ್ನು ಪರಿಶೀಲಿಸಿ ನೋಡಿದಾಗ ಮಧ್ಯದ ಟೆಟ್ರಾ ಪ್ಯಾಕೆಟ್ ಗಳು ಕಂಡುಬಂದಿದ್ದು ಆತನನ್ನು ಮಧ್ಯವನ್ನು ತೆಗೆದುಕೊಂಡು ಹೋಗಿ ಮಾರಾಟ ಮಾಡಲು ಯಾವುದಾದರೂ ಕಾರಣ ಇದೆ ಎಂದು ಇಲಾಖಾ ಸಿಬಬಂದಿಗಳು ಕೇಳಿದಾಗ ಆತನ ಹತ್ತಿರ ಯಾಾವುದೇ ಸರ್ಕಾರದ ಪರವಾನಿಗೆ ಇರುವುದಿಲ್ಲ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮಧ್ಯದದಿ ಟೆಟ್ರಾ ಪ್ಯಾಕೆಟ್ ಗಳನ್ನು ಸೋಮವಾರ ಪೇಟೆಯಿಂದ ತಂದಿರುವುದಾಗಿ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮಧ್ಯದ ಟೆಟ್ರಾ ಪ್ಯಾಕೆಟ್ ಗಳನು ಪರಿಶೀಲಿಸಲಾಗಿ ಅವುಗಳು ವಿವಿಧ ಬಗೆಯ 180 ಎಂ ಎಲ್ ನ 18 ಟೆಟ್ರಾ ಪ್ಯಾಕೆಟ್ ಗಳು ಮತ್ತು 90 ಎ ಎಲ್ 30 ಮಧ್ಯದ ಟೆಟ್ರಾ ಪ್ಯಾಕೆಟ್ ಗಳು ಆಗಿರುತತದೆ ಎಂದರೆ ಸರಿಯಲ್ಲ. ನಂತರ ಅಲ್ಲಿ ದೊರೆತ ಮಧ್ಯದ ಟೆಟ್ರಾ ಪ್ಯಾಕೆಟ್ ಗಳು ಬಿಳಿ ಬಟ್ಟೆಯಿಂದ ಸುತ್ತಿ ಟಿ ಎಂಬ ಅಕ್ಷರದಿಂದ ಸೀಲ್ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ನಂತರ ಸದರಿ ಬ್ಯಾಗಿಗೆ ಬಟ್ಟೆಯನ್ನು ಸುತ್ತಿ ಎಸ್ ಕೆ ಎಂಬ ಅಕ್ಷರದಿಂದ ಸೀಲ್ ಮಾಡಲಾಗಿದೆ ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ನಿಪಿ 1 ರಂತೆ ಸಮಯ ಬೆಳಗಗ 10.40-1.15 ರವರೆಗೆ ಮಹಜರು ಕ್ರಮ ಬರೆದು ಸದರಿ ಮಧ್ಯದ ಟೆಟ್ರಾ ಪ್ಯಾಕೆಟ್ ನ್ನು ನಮ್ಮ ಸಮಾಕ್ಷಮ ಪೋಲಿಸ್ ವಶಕ್ಕೆ ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮಹಜರ್ ಸಮಯದಲಿ ನಿಪಿ 2 ರಂತೆ ಮಾದರಿ ಮೊಹರನ್ನು ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 1 ಕ್ಕೆ ನಾನು (ಒದಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 2 ಕ್ಕೆ ನಾನು ಸ್ಥಳದಲ್ಲೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಿಃ 26.08.2024 ರಂದು ಈಗ ಓದಿ ಹೇಳಿದಂತೆ ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೆಳಿಕೆ ಭಾಗವನ್ನು ನಿಪಿ 6 ಎಂದು ಗುರುತಿಸಲಾಯಿತು. ಎಲ್ಲಾ ವಿಚಾರ ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಶ್ರೀ  ಹೆಚ್,ಕೆ.ಪಿ.  ವಕೀಲರಿಂದಃ

ಏನೂ ಇಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸರಿ ಇದೆ.

ಸಹಿ/-
ಸಿ.ಜೆ.ಮತ್ತು ಪ್ರ.ದ.ನ್ಯಾ .ದಂ
ಸೋಮವಾರಪೇಟೆ